# ಬಹು ಸೇವಾ ಕೇಂದ್ರವಾಗಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ
# ಪರ್ತಾಪುರ ಪ್ಯಾಕ್ಸ ಬಸವಕಲ್ಯಾಣ

ಭಾರತದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರೀ ಸಂಘಗಳು (ಪಿಕೆಪಿಎಸ್) ಸಹಕಾರೀ ಕೇತ್ರದ ಬುನಾದಿ ಎಂದೇ ಹೇಳಬಹುದು. ಇಡೀ ಸಹಕಾರಿ ವ್ಯವಸ್ಥೆಯೇ ಇದರ ಮೇಲೆ ನಿರ್ಮಿತವಾದುದಾಗಿದೆ. ಪಿಕೆಪಿಎಸಗಳು ಡಿಸಿಸಿ ಬ್ಯಾಂಕುಗಳನ್ನು ತನ್ನ ಹಣಕಾಸಿನ ಅಗತ್ಯತೆಗಾಗಿ ಅವಂಲಂಬಿಸಿದೆ. ದೇಶದಲ್ಲಿ 1 ಲಕ್ಷಕ್ಕಿಂತಲೂ ಹೆಚ್ಚು ಪ್ಯಾಕ್ಸಗಳಿದ್ದು 14 ಕೋಟಿಗಳಿಗಿಂತಲೂ ಹೆಚ್ಚು ಸದಸ್ಯರನ್ನು ಹೊಂದಿವೆ. ಗ್ರಾಮೀಣ ರೈತರ ಹಣಕಾಸಿನ ಅಗತ್ಯತೆಗಳನ್ನು ಪೂರೈಸುವ ಆ ಮೂಲಕ ರೈತರನ್ನು ಖಾಸಗೀ ಲೇವಾದೇವಿಗಾರರ ಶೋಷಣೆಯಿಂದ ರಕ್ಷಿಸುವ ಮಹತ್ತರ ಜವಾಬ್ದಾರಿಯನ್ನು ಪ್ಯಾಕ್ಷಗಳು ಯಶಸ್ವಿಯಾಗಿ ನಿರ್ವಹಿಸುತ್ತಿವೆ.

ಸದಸ್ಯರಿಂದ ಸಧ್ಯರಿಗಾಗಿ ಸದಸ್ಯರೇ ನಿರ್ವಹಿಸಲ್ಪಡುವ ಪ್ರಜಾಪ್ರಭುತ್ವವಾದಿ ಸಂಘಟನೆಗಳಾದ ಸಹಕಾರ ಸಂಸ್ಥೆಗಳು ಸ್ವಜನ ಪಕ್ಷಪಾತ, ನಿರ್ವಹಣೆಯ ಕೊರತೆ, ಅಗಾಧವಾದ ನಿರ್ವಹಣಾವೆಚ್ಚ, ಕಮ್ಮಿ ಲಾಭ, ಜನರ ವಿಶ್ವಾಸದ ಕೊರತೆಯಿಂದ ಠೇವಣಿಗಳ ಕೊರತೆ, ಬಂಡವಾಳದ ಸಮಸ್ಯೆ ಏರುತ್ತಿರುವ ಅನುತ್ಪಾದಕ ಆಸ್ತಿ, ಮರುಪಾವತಿಯಲ್ಲಿ ಕೊರತೆ ಮುಂತಾದ ಸಮಸ್ಯೆಗಳಿಂದ ಬಳಲುತ್ತಿದ್ದು ಜನರಿಗೆ ಅತ್ಯುತ್ತಮ ಸೇವೆ ನೀಡುವಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿವೆ. ಪ್ಯಾಕ್ಸಗಳನ್ನು ಉತ್ತಮ ಲಾಭದಾಯಕ ಸಂಸ್ಥೆಗಳಾಗಿ ಮಾಡಲು ಅವುಗಳ ವ್ಯಹಾರವನ್ನು ಲಾಭದಾಯಕ ಮಾಡುವ ಅಗತ್ಯವಿದೆ. ಇಂದಿನ ಪರಿಸ್ಥಿತಿಯಲ್ಲಿ ಕೃಷಿ ಸಾಲಗಳ ವ್ಯವಹಾರದ ಮೇಲೆ ಅವಲಂಬಿತವಾದರೆ ಪ್ಯಾಕ್ಸಗಳು ಲಾಭ ಮಾಡುವುದು ದೂರದ ಮಾತೇ ಆಗಿದೆ. ಸಹಕಾರಿ ಸಂಸ್ಥೆಗಳ ಉದ್ದೇಶದಲ್ಲಿ ಕೂಡಾ ಸದಸ್ಯರಿಗೆ ಅನುಕೂಲವಾಗುವ ಎಲ್ಲಾರೀತಿಯ ಸೇವೆಗಳನ್ನು ಒದಗಿಸುವುದು ತನ್ನ ಕರ್ತವ್ಯವಾಗಿರುವುದರಿಂದ ಪ್ಯಾಕ್ಷಗಳು ಬಹುಸೇವೆಗಳನ್ನು ಒದಗಿಸುವುದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಸರಕಾರವು ಯೋಜನೆಗಳನ್ನು ತಂದಿದ್ದು ನಬಾರ್ಡ ಮೂಲಕ ಅದನ್ನು ಜಾರಿಗೊಳಿಸುತ್ತಿದೆ.

## ಬಹುಸೇವಾ ಕೇಂದ್ರಗಳಾಗಿ ಪ್ಯಾಕ್ಸಗಳು:

ಬಹಳಷ್ಟು ಪ್ಯಾಕ್ಸಗಳು ತನ್ನ ರೈತ ಸದಸ್ಯರಿಗೆ ಅನುಕೂಲವಾಗುವ ಹಲವು ಸೇವೆಗಳನ್ನು ಒದಗಿಸುತ್ತಿದ್ದು ರೈತರಿಗೆ ತನ್ನ ಆದಾಯವನ್ನು ದ್ವಿಗುಣಗೊಳಿಸುವ ಅವಕಾಶವನ್ನು ನೀಡುತ್ತಿವೆ. ಕೃಷಿ ಯಂತ್ರೋಪಕರಣಗಳ ಸೇವೆ, ಆನ್ ಲೈನ್ ಟಿಕೆಟ ಬುಕ್ಕಿಂಗ ಸೇವೆ, ರಸಗೊಬ್ಬರ ಮತ್ತು ಕೀಟನಾಶಕ ಮಾರಾಟ, ಬೀಜಗಳ ಸಂಸ್ಕರಣೆ ಮತ್ತು ಮಾರಾಟ, ಪಶು ಆಹಾರದ ಮಾರಾಟ, ಇ ಸ್ಟಾಂಪಿಂಗ ಸೇವೆ, ಎಣ್ಣೆ ಗಾಣ, ಹಿಟ್ಟಿನ ಗಿರಣಿಗಳು, ಅಕ್ಕಿ ಮಿಲ್, ಇತ್ಯಾದಿ ಸೇವೆಗಳನ್ನು ಒದಗಿಸುವ ಮೂಲಕ ರೈತರ ಅಭ್ಯುದಯಕ್ಕೆ ಕಾರಣವಾಗಿವೆ.

ರೈತರಿಗೆ ನೇರವಾಗಿ ಸೇವೆಗಳನ್ನು ಒದಗಿಸಲು ಅವಕಾಶಗಳಿಲ್ಲದ ಕಡೆ ಅಂಗಡಿ ಮುಂಗಟ್ಟುಗಳ ನಿರ್ಮಾಣ ಮತ್ತು ಬಾಡಿಗೆ ನೀಡುವುದು, ಗೋದಾಮುಗಳ ನಿರ್ವಹಣೆ ಹೀಗೆ ಇತರ ವ್ಯವಹಾರಗಳ ಮೂಲಕ ಹಣಕಾಸಿನ ನಿರ್ವಹಣೆಯನ್ನು ಉತ್ತಮವಾಗಿ ಮಾಡಿ ಲಾಭಗಳಿಸಿ ಸದಸ್ಯರಿಗೆ ಹೆಚ್ಚೆಚ್ಚು ಡಿವಿಡೆಂಡ ನೀಡುವ ಮೂಲಕ ಕೂಡಾ ಸದಸ್ಯರಿಗೆ ನೆರವಾಗಲು ಸಾಧ್ಯವಿದೆ ಎಂಬುದನ್ನು ನಿರೂಪಿಸುವ ಪ್ಯಾಕ್ಸಗಳು ಸಾಕಷ್ಟು ಸಂಖ್ಯೆಯಲ್ಲಿವೆ.

ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಪರ್ತಾಪುರ ಪ್ಯಾಕ್ಸನಲ್ಲಿ ಸದಸ್ಯರ ಆವಶ್ಯಕ ಸೇವೆಗಳಲ್ಲದೇ ಇತರ ವ್ಯವಹಾರಗಳಾದ ಗೋದಾಮು ಮತ್ತು ಬಾಡಿಗೆ ವ್ಯವಹಾರಗಳಿಂದ ಪ್ಯಾಕ್ಸನ್ನು ಲಾಭದಾಯಕವಾಗಿ ನಡೆಸುತ್ತಿರುವುದು ಕೂಡಾ ಮಾದರಿಯಾಗಿದೆ.

## ಪ್ರತಾಪೂರ ಪ್ಯಾಕ್ಸನ ಕ್ಷೇತ್ರ ಪರಿಚಯ :

ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಪ್ರತಾಪೂರ ಪಿಕೆಪಿಎಸ್ ಆರಂಭವಾಗಿದ್ದು ಕ್ರಿಸ್ತ ಶಕೆ 1961–62ರಲ್ಲಿ. ಊರಿನ ಪ್ರಮುಖ ರೈತ ಮುಖಂಡರೂ ಹಿರಿಯರೂ ಆಗಿದ್ದ ಭೀಮಣ್ಣಾ ಬೈಲೂರೆ ಅವರ ನೇತೃತ್ವದಲ್ಲಿ ಈ ಪ್ಯಾಕ್ಸ ಆರಂಭವಾಗಿತ್ತು. ಸ್ಥಾಪಕ ಅಧ್ಯಕ್ಷರಾಗಿ 3 ಅವಧಿಗೆ ಸೇವೆ ಸಲ್ಲಿಸಿದ ಭೀಮಣ್ಣಾ ಬೈಲೂರೆ ಅವರು ಊರಿನ ಜನರ ಸದಸ್ಯರ ವಿಶ್ವಾಸ ಗಳಿಸಿ ಪ್ಯಾಕ್ಸಗಾಗಿ ಊರಿನ ಮಧ್ಯ ಭಾಗದಲ್ಲಿ ೨ ಎಕರೆ ಜಮೀನನ್ನು ಸರಕಾರದಿಂದ ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಪ್ರತಾಪೂರ ಪ್ಯಾಕ್ಸನ ವ್ಯಾಪ್ತಿಯಲ್ಲಿ ಎರಡು(2) ಹಳ್ಳಿಗಳು ಬರುತ್ತಿದ್ದು ಒಟ್ಟು 7293 ಜನಸಂಖ್ಯೆ ಹೊಂದಿದೆ. ೨೪೦೦ ರೈತಕುಟುಂಬಗಳಲ್ಲಿ 1210 ಸಣ್ಣ ರೈತರು, ೭೦೦ ಮಧ್ಯಮ ರೈತರು ಮತ್ತು ೪೯೦ ಜನ ದೊಡ್ಡ ರೈತರಿದ್ದಾರೆ, ಒಟ್ಟು 3997=00 ಹೆಕ್ಟೇರ್ ಕೃಷಿ ಭೂಮಿ ಪ್ಯಾಕ್ಸ ವ್ಯಾಪ್ತಿಯಲ್ಲಿದ್ದು, ಅದರಲ್ಲಿ 868=45 ಹೆಕ್ಟೇರ್ ನೀರಾವರಿ ಸೌಲಭ್ಯ ಹೊಂದಿದೆ.

## ಪ್ರಮುಖ ಕೃಷಿ ಉತ್ಪನ್ನಗಳು :–

ಪ್ಯಾಕ್ಸನ ಚಟುವಟಿಕೆಗಳು ಯಾವತ್ತು ನೇರವಾಗಿ ಪ್ರದೇಶದ ರೈತರ ಕೃಷಿ ಚಟುವಟಿಕೆಗಳ ಮೇಲೆ ಅವಲಂಬಿತವಾಗಿರುತ್ತದೆ. ಪ್ರತಾಪೂರ ಕ್ಷೇತ್ರ ವ್ಯಾಪ್ತಿಯಲ್ಲಿ ತೋಗರಿ, ಸೋಯಾ, ಉದ್ದು, ಹೆಸರು ಮತ್ತು ಕಬ್ಬು ಪ್ರಮುಖ ಕೃಷಿ ಬೆಳೆಯಾಗಿದ್ದರೆ ಶಿಮ್ಲಾ ಮಿರ್ಚಿ, ಹೂಕೋಸು ಗೋಬಿ, ಆಲುಗೆಡ್ಡೆ, ಉಳ್ಳಾಗಡ್ಡಿ, ಶುಂಠಿ ಮತ್ತು ಇತರೆ ತರಕಾರಿಗಳು ಕೂಡಾ ಬೆಳೆಯಲ್ಪಡುತ್ತದೆ. ಒಟ್ಟು ಸರಾಸರಿ 22000=00 ಟನ್‌ಗಳಷ್ಟು ಕೃಷಿ ಉತ್ಪನ್ನಗಳನ್ನು ರೈತರು ಪ್ರತೀ ವರ್ಷ ಬೆಳೆಯುತ್ತಾರೆ.

## ಪ್ಯಾಕ್ಸನ ಸದಸ್ಯರು ಮತ್ತು ಶೇರುಬಂಡವಾಳ

ಸಹಕಾರಿ ಸಂಸ್ಥೆಗಳಲ್ಲಿ ಸಂಘದ ಸದಸ್ಯರೇ ಅದರ ಮಾಲೀಕರು ಮಾತ್ರವಲ್ಲ ಸದಸ್ಯರೇ ಸಹಕಾರೀ ಸಂಸ್ಥೆಗಳ ಜೀವಾಳ. ಸದಸ್ಯರ ಅವಶ್ಯಕತೆಗಳಿಗೆ ಸ್ಪಂದಿಸುವುದಕ್ಕಾಗಿಯೇ ಸಹಕಾರಿ ಸಂಸ್ಥೆಯಿದ್ದು ಸದಸ್ಯರು ಶೇರು ಪಡೆದುಕೊಳ್ಳುವುದರ ಮೂಲಕ ಸಂಸ್ಥೆಯನ್ನು ಸುಧೃಢಗೊಳಿಸಬಲ್ಲರು. ಪ್ರತಾಪೂರ ಸಹಕಾರಿ ಸಂಘದಲ್ಲಿ 1321 ಸದಸ್ಯರಿದ್ದು ಒಟ್ಟು ರೂಪಾಯಿ 68,57,214 ಶೇರು ಬಂಡವಾಳವನ್ನು ಹೊಂದಿದೆ,

2025ನೇ ಮಾರ್ಚ ಅಂತ್ಯಕ್ಕೆ 1315 ಶೇರುದಾರರಿದ್ದು 6854214 ರೂಪಾಯಿ ಶೇರು ಬಂಡವಾಳ ಇರುವುದು ಸಂಸ್ಥೆಯ ಧೃಢತೆಯನ್ನು ತೋರಿಸುತ್ತದೆ. ಅದರಲ್ಲೂ ಪ.ಜಾತಿಯ 60, ಪ.ಪಂಗಡದ 65, ಹಿಂದುಳಿದ ವರ್ಗದ 82 ಶೇರುದಾರರಿರುವುದು ಸಂಸ್ಥೆಯು ಎಲ್ಲಾ ವರ್ಗದ ಜನರನ್ನು ತಲುಪುವುದರ ದ್ಯೋತಕವಾಗಿದೆ.

## ಪ್ಯಾಕ್ಸನ ಸಿಬ್ಬಂದಿಗಳು ಮತ್ತು ನೌಕರ ವೃಂದ

ಸಹಕಾರಿ ಸಂಸ್ಥೆಗಳಲ್ಲಿ ಸಂಘದ ಸದಸ್ಯರೇ ಅದರ ಮಾಲೀಕರು ಆದರೆ ಸಂಘದ ಅಭಿವೃದ್ಧಿಯಲ್ಲಿ ಸಂಘದ ಸಿಬ್ಬಂದಿಗಳ ಜವಾಬ್ದಾರಿ ಬಹಳ ಮಹತ್ವದ್ದಾಗಿದೆ. ಪತಾಪುರ ಪ್ಯಾಕ್ಸನ ಸಿಬ್ಬಂದಿಗಳ ವಿವರ ಕೆಳಗಿನಂತಿದೆ. ಮುಖ್ಯಕಾರ್ಯನಿರ್ವಾಹಕರಾಗಿ ಶ್ರೀ ಗುಂಡೆರಾಯ ಕಲ್ಯಾಣರಾವ ದಾವರೆ ರವರು 16 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಅವರಿಗೆ ಸಹಾಯಕರಾಗಿ

| ಹೆಸರು | ಹುದ್ದೆ | ಸೇವೆಯ ವರ್ಷಗಳು |
|---|---|---|
| ಪ್ರಭಾಕರ ಕೆ ಚೌದ್ರಿ | ಸೇಲ್ಸ ಮ್ಯಾನ್ | 50 |
| ಸನ್ಮುಕಪ್ಪಾ ಬಿ ಬಿಡವಿ | ಅಕೌಂಟಂಟ್ | 16 |
| ಶಿವಾನಂದ ಭಿ ಬಿರಾದರ | ಕ್ಯಾಶಿಯರ್ | 16 |
| ಅವಿನಾಶ ಮಡಿವಾಳಪ್ಪಾ | ಕ್ಲರ್ಕ್ | 07 |
| ಸುಧಾರಾಣಿ ಗಂಡ ಜಗದೀಶ | ಎಸ್,ಎಚ್.ಜಿ. ಸುಪರ್‌ವೈಜರ್ | 03 |
| ಅವಿನಾಶ ಮಡಿವಾಳಪ್ಪಾ | ಕ್ಲರ್ಕ್ | 07 |
| ಕಮಲಾಕರ್ ರ ಕಾಂಬ್ಳೆ | ಸೇವಕ | 16 |
| ಶಿವಾಜಿ ಮಾ ಪಾಟೀಲ್ | ಸೇವಕ | 07 |

## ಠೇವಣಿಗಳು :-

ಠೇವಣಿ ಸಂಗ್ರಹಣೆ ಎಂದರೆ ಅದು ಸಂಘದ ಮೇಲೆ ಜನರು ಇಟ್ಟಿರುವ ವಿಶ್ವಾಸ ಮತ್ತು ನಂಬಿಕೆಯ ದ್ಯೋತಕವೇ ಆಗಿರುತ್ತದೆ. ಆರ್ಥಿಕ ಸೇವೆಗಳನ್ನು ಒದಗಿಸುವ ಸಹಕಾರಿ ಸಂಸ್ಥೆಗಳಿಗೆ ಬಂಡವಾಳ ಒದಗಿಸುವ ಅತ್ಯಂತ ಪ್ರಮುಖ ಮಾರ್ಗವೆಂದರೆ ಠೇವಣಿಗಳನ್ನು ಹೊಂದುವುದಾಗಿದೆ. ಸದಸ್ಯರಿಂದ ಠೇವಣಿ ಸ್ವೀಕರಿಸಿ ಅಗತ್ಯವುಳ್ಳವರಿಗೆ ಸಾಲ ನೀಡಿ ಬಡ್ಡಿ ಆಕರಿಸುವ ಮೂಲಕ ಲಾಭ ಗಳಿಸುವುದೇ ಸಂಸ್ಥೆಯ ಉದ್ದೇಶವೂ ಆಗಿರುತ್ತದೆ. ಈ ನಿಟ್ಟಿನಲ್ಲಿ ಸಂಘದವರು, ವಿವಿಧ ರೀತಿಯ ಠೇವಣಿಗಳನ್ನು ಸದಸ್ಯರಿಂದ ಸಂಗ್ರಹಿಸುತ್ತಿದ್ದು ಅವುಗಳಲ್ಲಿ ಎಫ್.ಡಿ, ಆರ್.ಡಿ, ಪಿಗ್ಮಿ, ಎಸ್.ಹೆಚ್.ಜಿ ವೈಯಕ್ತಿಕ ಉಳಿತಾಯ ಪ್ರಮುಖವಾಗಿದೆ.

## ಸಂಸ್ಥೆಯ ಆರ್ಥಿಕ ವಿಶ್ಲೇಷಣೆ :-

**ಆಡಿಟ್ ವರದಿ ಕ್ಲಾಸಿಫಿಕೇಷನ್: ' ಬಿ '**

| | | 2022-23 | 2023-24 | 2024-25 |
|---|---|---|---|---|
| 1 | Share Capital | 716818.00 | 7258228.00 | 7213772.00 |
| 2 | Reserves Fund | 9153992.51 | 9353826.51 | 9532964.53 |
| 3 | Grants /Funds Govt Share | 220500.00 | 220500.00 | 220500.00 |
| 4 | Undistributed Profit | 1353174.00 | 1353274.72 | 1819861.27 |
| 5 | Borrowings | 66177359.00 | 65757591.00 | 73397038.00 |
| 6 | Deposits | 117745875.00 | 116324572.00 | 101317577.00 |
| 7 | Investments in DCCB /others | 70764110.00 | 70844306.00 | 75911743.00 |
| 8 | Loans & Advances | 116050211.00 | 115491346.00 | 113095957.00 |
| 9 | Net Profit | ------ | 3908171.55 | 3237112.00 |
| 10 | Total Amt of Fertilizer Sold | 3186893.00 | 3781196.00 | 2709391.00 |
| 11 | Profit from Fertilizer sale | 274133.00 | 85111.00 | 87000.00 |
| 12 | KCC Loan Outstanding | 54067184.00 | 53704464.00 | 53118529.00 |
| 13 | MT Loan Outstanding | 13382310.00 | 12294753.00 | 9585875.00 |

| | | | | |
|---|---|---|---|---|
| 14 | BDP Loan Outstanding | 44130784.00 | 45173087.00 | 44626652.00 |
| 15 | Other Loans | 4469933.00 | 4319042.00 | 5764901.00 |
| 16 | NPA Amount | 3227508.00 | 2192585.00 | 2218210.00 |
| 17 | NPA % | 2.78 | 1.89 | 1.92 |

## ಬಡ್ಡಿದರಗಳು :-

ಜನರು ವಿಶ್ವಾಸ ಮತ್ತು ನಂಬಿಕೆಗಳ ಮೇಲೆ ಠೇವಣಿ ಇರಿಸುತ್ತಾರಾದರು ಆಕರ್ಷಕ ಬಡ್ಡಿದರಗಳು ಕೂಡಾ ಅಷ್ಟೇ ಪ್ರಭಾವ ಬೀರುತ್ತವೆ. ಮಾರುಕಟ್ಟೆ ದರಗಳಿಗಿಂತ ಕೊಂಚ ಅಧಿಕ ದರವನ್ನೇ ನೀಡುವ ಸಹಕಾರ ಸಂಘಗಳ ಕ್ರಮವೂ ಠೇವಣಿ ಆಕರ್ಷಣೆಗೆ ಕಾರಣವಾಗಿದೆ ಎಂಬುದೂ ಸತ್ಯವೇ ಆಗಿದೆ. ಆದರೂ ಬಹಳ ಅಧಿಕ ಬಡ್ಡಿದರಗಳು ಸಾಲದ ಬಡ್ಡಿದರಗಳ ಮೇಲೂ ಪ್ರಭಾವ ಬೀರುವುದರಿಂದ ಕಾಲಾನುಕಾಲಕ್ಕೆ ಮಾರುಕಟ್ಟೆ ವಿಶ್ಲೇಷಣೆ ಮಾಡುತ್ತಾ ಬಡ್ಡಿದರಗಳನ್ನೂ ನಿರ್ಧರಿಸುವುದು ವೃತ್ತಿಪರತೆಯನ್ನು ತೋರುತ್ತದೆ. ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಪ್ರತಾಪೂರ ಪಿಕೆಪಿಎಸ್ ಕೂಡಾ ಅತ್ಯಂತ ವ್ಯಾವಹಾರಿಕವಾಗಿ ಕಾಲಾನು ಕಾಲಕ್ಕೆ ಠೇವಣಿಗಳ ಬಡ್ಡಿ ದರವನ್ನು ಪರಿಷ್ಕರಿಸುತ್ತಾ ಸಂಸ್ಥೆ ಲಾಭದಾಯಕವಾಗಿ ಸಾಗಲು ಕಾರಣವಾಗುತ್ತಿದೆ.

## ಡಿಪಾಸಿಟ್ ಮಿಕ್ಸ್ :

ಬ್ಯಾಂಕಿಂಗ ಕ್ಷೇತ್ರದಲ್ಲಿ ಡಿಮಾಂಡ್ ಮತ್ತು ಟೈಮ್ ಡಿಪಾಸಿಟ್ ಠೇವಣಿಗಳ ಗಾತ್ರವು ಹಣಕಾಸು ವ್ಯವಹಾರದ ಆರೋಗ್ಯಕರ ನಿರ್ವಹಣೆಯ ಸೂಚಕವಾಗಿದೆ. ಉಳಿತಾಯ ಖಾತೆ ಠೇವಣಿಗಳು, ಕೂಡಲೇ ಹಿಂತೆಗೆಯಬಹುದಾದ ವ್ಯವಹಾರ ಖಾತೆಯ ಠೇವಣಿಗಳು ಡಿಮಾಂಡ ಡಿಪಾಸಿಟ್ ಅಡಿಯಲ್ಲಿ ಬರುತ್ತವೆ. ನಿಗದಿತ ಅವಧಿ ಬದ್ದ ಠೇವಣಿಗಳು, ಪುನರಾವರ್ತಿತ ಠೇವಣಿಗಳು ಟೈಮ್ ಡಿಪಾಸಿಟ್ ಎಮದೆಣಿಸಿಕೊಳ್ಳುತ್ತವೆ. ಇವು ಸಂಸ್ಥೆಯ ದ್ರವತ್ವ ನಿರ್ವಹಣೆಗೆ ಮತ್ತು ಕಾನೂನು ಬದ್ದ ದ್ರವ್ಯತಾ ಅನುಪಾತ ನಿರ್ವಹಣೆಗೆ ಸಹಕಾರಿಯಾಗಿವೆ. ಅವಧಿ ಠೇವಣಿಗಳು ಹೆಚ್ಚು ವೆಚ್ಚದಾಯಕವಾಗಿರುತ್ತವೆ. ಸಾಮಾನ್ಯವಾಗಿ ಇವುಗಳ ನಡುವೆ 70:30 ಅಂತರವಿದ್ದರೆ ಒಳ್ಳೆಯದು ಎಂಬುದು ಪರಿಣತರ ಅನಿಸಿಕೆ. ಅದಕ್ಕೆ ಪೂರಕವಾಗಿ ಪರ್ತಾಪುರ ಪ್ಯಾಕ್ಷನವರು ಈ ಅಂತರವನ್ನು 80:20 ರಂತೆ ಕಾಪಾಡಿಕೊಂಡಿರುವುದು ಗಮನಾರ್ಹವಾಗಿದೆ.

| | | | | |
|---|---|---|---|---|
| ಮುದ್ದತ್ತು ಠೇವಣಿ | 8.5% | 113645875 | 111824572 | 84331114 |
| ರಿಕರಿಂಗ್ ಡಿಪಾಸಿಟ್ | 9.5% | 1250000 | 1450000 | 1355520 |
| ಎಸ್.ಬಿ.ಉಳಿತಾಯ ಖಾತೆ | 3.5% | 2850000 | 3050000 | 15630943 |
| **ಒಟ್ಟು** ಠೇವಣಿ **ರೂ** | | **117745875** | **116324572** | **101317577** |

## ಹೂಡಿಕೆಗಳು :-

ಆರ್ಥಿಕ ಸಂಸ್ಥೆಗಳ ಸಮರ್ಪಕ ನಿರ್ವಹಣೆಯು ಅವುಗಳ ಹೂಡಿಕೆಯ ಪರಿಣಾಮಕಾರಿತ್ವದ ಮೇಲೆ ನಿರ್ಧರಿಸಲ್ಪಡುತ್ತದೆ. ಗರಿಷ್ಠ ಇಳುವರಿ ತರುವ ಸಾಧನಗಳ ಮೇಲೆ ಹೂಡಿಕೆಗಳು ಇದ್ದಾಗ ಸಂಸ್ಥೆ ಲಾಭ ಗಳಿಸಬಲ್ಲದು. ಸಂಸ್ಥೆಯ ಬಂಡವಾಳವನ್ನು ದಕ್ಷತೆಯಿಂದ ಬಳಸುವುದು ಸಾಲ ಮತ್ತು ಸೇವಾ ವ್ಯವಹಾರಗಳಿಗೆ ಸೂಕ್ತ ಬೆಲೆ ನಿರ್ಧಾರ ಮಾಡುವುದು ಹೊಸ ಹೊಸ ವ್ಯವಹಾರಗಳಿಗೆ ಯೋಜನೆ ರೂಪಿಸುವುದು ಮತ್ತು ಸಂಸ್ಥೆಯ ದ್ರವ್ಯಶೀಲತೆಯನ್ನು ಸಮರ್ಪಕವಾಗಿ ನಿರ್ವಹಿಸುವುದು ಲಾಭದಾಯಕತೆಗೆ ಅವಶ್ಯಕವಾಗಿರುತ್ತದೆ. ಬಂಡವಾಳದ ಹೂಡಿಕೆ ವಿಧಾನಗಳು ಇದನ್ನು

ನಿರ್ಧರಿಸುತ್ತದೆ. ಬಹಳಷ್ಟು ಸಹಕಾರಿ ಸಂಘಗಳು ಮೇಲೆ ತಿಳಿಸಿದ ಅಂಶಗಳನ್ನು ಸೂಕ್ತವಾಗಿ ನಿರ್ವಹಿಸದೇ ಹಾನಿಗೆ ಒಳಗಾಗುತ್ತವೆ.

ಈ ದಿಸೆಯಲ್ಲಿ ಪ್ರತಾಪೂರ ಸಂಘವು ಮಾದರಿಯಾಗಿದ್ದು ತನ್ನ ಹೂಡಿಕೆಗಳನ್ನು ಅತ್ಯಂತ ಎಚ್ಚರಿಕೆಯಿಂದ ಮಾಡಿರುವುದನ್ನು ಗಮನಿಸಬಹುದಾಗಿದೆ, ತನ್ನಲ್ಲಿರುವ ಬಂಡವಾಳದ ಹೆಚ್ಚಿನಂಶವನ್ನು ಕಡಿಮೆ ಇಳುವರಿ ನೀಡುವಲ್ಲಿ ಹೂಡಿಕೆ ಮಾಡದೇ ಲೆಕ್ಕಾಚಾರದೊಂದಿಗೆ ಬಳಸಿರುವುದನ್ನು ಕಾಣಬಹುದಾಗಿದೆ. ಸಂಘದ ಒಟ್ಟು ಆದಾಯದಲ್ಲಿ ಹೂಡಿಕೆಗಳ ಮೇಲಿನ ಬಡ್ಡಿ ಆದಾಯವು ಒಟ್ಟು ರೂ.**4431514** ಇರುವುದು ಗಮನಿಸಬೇಕಾದ ಅಂಶವಾಗಿದೆ. ಡಿ.ಸಿ.ಸಿ. ಬ್ಯಾಂಕನಲ್ಲಿ ರೂ. **75911743/-** ಸ್ಥಿರ ಠೇವಣಿ ಇಟ್ಟಿರಲಾಗುತ್ತದೆ.

## ಸಾಲದ ವ್ಯವಹಾರ :-

ಸಹಕಾರಿ ಸಂಘದ ಮೂಲ ಉದ್ದೇಶವೇ ಸದಸ್ಯರಿಗೆ ಸಾಲ ಒದಗಿಸುವುದು ಆಗಿರುತ್ತದೆ, ಸದಸ್ಯರ ಕೃಷಿ ಚಟುವಟಿಕೆಗಳಿಗೆ ಕೃಷಿ ಸಾಲವನ್ನು ಕೃಷಿ ಅಭಿವೃದ್ಧಿಗಾಗಿ ಮಧ್ಯಮಾವಧಿ ಸಾಲವನ್ನು ಇತರ ಕೆಲಸಗಳಿಗಾಗಿ ವಾಣಿಜ್ಯ ಸಾಲವನ್ನೂ ನೀಡುತ್ತಿದ್ದು ಒಟ್ಟು ರೂ. **113095957/-** ಸಾಲವನ್ನು ನೀಡಲಾಗಿದೆ, ಇದರಲ್ಲಿ ಕೃಷಿಗಾಗಿ **62704404/-** ಮತ್ತು ಕೃಷಿಯೇತರ **44626652/-** ವಿತರಿಸಲಾಗಿದೆ. ಸಾಲ ವಸೂಲಿಗಾಗಿ ಯಾವುದೇ ತೆರನ ಕೋರ್ಟ ಕಚೇರಿ ಕೇಸ್‌ಗಳ ಮೂಲಕ ನಿರ್ವಹಿಸದೇ ಇರುವುದು ಕೂಡಾ ಸಂಸ್ಥೆಯ ಹೆಗ್ಗಳಿಕೆಯಾಗಿದೆ. ಸಾಲ ಮರುಪಾವತಿಯು **98%** ಇದ್ದು ಎನ್ ಪಿ ಎ ಪ್ರಮಾಣ **1.92 %** ಇರುವುದು ಗಮನಾರ್ಹವಾಗಿದೆ.

| *ಸಾಲಗಳು* | *ಸಾಲ ಪಡೆದ ಸದಸ್ಯರ ಸಂಖ್ಯೆ* | *ಒಟ್ಟು ಮೊತ್ತ* |
|---|---|---|
| ಅಲ್ಪಾವಧಿ ಸಾಲ | 1098 | 53118529.00 |
| ಮಧ್ಯಮಾವಧಿ ಸಾಲ | 72 | 9585875.00 |
| ಕೃಷಿಯೇತರ ಸಾಲ | 440 | 44626652.00 |
| ಇತರ ಸಾಲ | 52 | 5764901.00 |
| ಒಟ್ಟು ಸಾಲ ನೀಡಿಕೆ | 1662 | **113095957.00** |

## ಸಾಲೇತರ ಚಟುವಟಿಕೆಗಳು :-

ಸಹಕಾರಿ ಸಂಘದ ಮೂಲ ಉದ್ದೇಶವೇ ಸದಸ್ಯರಿಗೆ ಸಾಲ ಒದಗಿಸುವುದು ಆದರೂ ವ್ಯವಹಾರದಲ್ಲಿ ಲಾಭದಾಯಕವಾಗಿ ಸೇವೆ ನೀಡಲು ಸಾಲೇತರ ವ್ಯವಹಾರಗಳೂ ಆವಶ್ಯಕವಾಗಿರುತ್ತವೆ. ಸದಸ್ಯರ ಕೃಷಿ ಚಟುವಟಿಕೆಗಳಿಗೆ ಪೂರಕವಾದ ಇತರ ಸೇವೆಗಳನ್ನು ಕೂಡಾ ಪ್ಯಾಕ್ಸ ನಿರ್ವಹಿಸಿದರೆ ಅದು ಮಾದರಿಯಾಗುತ್ತದೆ. ಸದಸ್ಯರಿಗೆ ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಪರ್ತಾಪುರ ಪ್ಯಾಕ್ಸನವರು ಸದಸ್ಯರ ಆವಶ್ಯಕ ಚಟುವಟಿಕೆಗಳಾದ ರೇಶನ ಅಂಗಡಿ ನಡೆಸುವುದು, ಗೊಬ್ಬರ ಮಾರಾಟ ಮಾಡುವುದು, ಬಾಡಿಗೆಗೆ ಗೋದಾಮುಗಳನ್ನು ನೀಡುವುದು, ಅಂಗನವಾಡಿಗೆ ಆಹಾರ ವಿತರಿಸುವುದು, ಹಿಟ್ಟಿನ ಗಿರಣಿ ನಡೆಸುವುದು ಮೊದಲಾದ ವ್ಯವಹಾರಗಳನ್ನು ನಡೆಸುತ್ತಿದೆ.

## ರೇಷನ್ ಅಂಗಡಿ:-

ಸದಸ್ಯರಿಗೆ ಅಗತ್ಯ ಸೇವೆಗಳನ್ನು ನೀಡುವುದೇ ಸಹಕಾರಿ ಸಂಘದ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಹಳ್ಳಿಯ ಜನರಿಗೆ ಸಕಾಲದಲ್ಲಿ ಯಾವುದೇ ಶೋಷಣೆ ಇಲ್ಲದಂತೆ ಸರಕಾರಿ ಸೌಲಭ್ಯ ತಲುಪಿಸುವಲ್ಲಿ ಪ್ಯಾಕ್ಸಗಳೇ ಸದಾ ಮುಂದು. ಲಾಭಕ್ಕಿಂತಲೂ ಸೇವೆ ಮುಖ್ಯ ಎಂಬ ಧ್ಯೇಯದೊಂದಿಗೆ ಆರಂಭಿಸಿರುವ ರೇಷನ ಅಂಗಡಿ ಮೂಲಕ ಜನರಿಗೆ ಸರಕಾರದ ಆಹಾರ ಧಾನ್ಯ ವಿತರಣೆ ಕಾರ್ಯಕ್ರಮವನ್ನು ವಿಶ್ವಾಸಾರ್ಹವಾಗಿ ತಲುಪಿಸಿರುವುದು ಇವರ ಹೆಗ್ಗಳಿಕೆಯಾಗಿದೆ. ಕಳೆದ ಮೂವತ್ತು ವರ್ಷಗಳಿಂದಲೂ 1062 ಕಾರ್ಡದಾರ ಜನರಿಗೆ ಅನುಕೂಲಕರವಾಗಿ ಸೇವೆ ನೀಡುತ್ತಿರುವ ರೇಷನ ಅಂಗಡಿ ವ್ಯವಹಾರದಿಂದ ರೂ 360000/- ಆದಾಯ ಗಳಿಸಿರುವುದು ಸಹಕಾರಿ ವ್ಯವಸ್ಥೆಗೆ ಆಶಾದಾಯಕವಾಗಿದೆ.

## ಗೊಬ್ಬರ ಮಾರಾಟ-

ತನ್ನ ರೈತ ಸದಸ್ಯರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸಹಕಾರ ಸಂಘಗಳು ಸಾಮಾನ್ಯವಾಗಿ ಕೈಗೊಳ್ಳುವ ವ್ಯವಹಾರವೇ ಗೊಬ್ಬರ ವಿತರಣೆ. ರಾಸಾಯನಿಕ ಗೊಬ್ಬರ ಮಾರಾಟದಲ್ಲಿ ಪ್ಯಾಕ್ಸಗಳು ಖಾಸಗಿಯವರಂತೆ ಹೆಚ್ಚಿನ ಬೆಲೆ ನಿಗದಿಪಡಿಸದೆ ಹೆಚ್ಚು ಲಾಭದ ಆಸೆಗೆ ಬೀಳದೆ ರೈತರಿಗೆ ಗೊಬ್ಬರ ನೀಡುವಲ್ಲಿ ಸ್ವಲ್ಪ ಏರುಪೇರಾದರು ನಷ್ಟ ಅನುಭವಿಸಬೇಕಾದ ಸನ್ನಿವೇಶವಿರುತ್ತದೆ. ಆದರೆ ಪರ್ತಾಪುರ ಪ್ಯಾಕ್ಸ ಗೊಬ್ಬರ ವಿತರಣೆ ಕಾರ್ಯವನ್ನು ಅತ್ಯಂತ ಮುತುವರ್ಜಿಯಿಂದ ಪಾರದರ್ಶಕವಾಗಿ ನಡೆಸಿಕೊಂಡು ಬರುತ್ತಿದ್ದು ಪ್ರತೀ ವರ್ಷ ಕೂಡಾ ಲಾಭವನ್ನು ಗಳಿಸುತ್ತಿದೆ. ಈ ವರ್ಷ ಕೂಡಾ ಒಟ್ಟು ರೂ 27.10 ಲಕ್ಷದಷ್ಟು ಗೊಬ್ಬರ ಮಾರಾಟ ಮಾಡಿ ರೂ 2.70 ಲಾಭ ದಾಖಲಿಸಿದೆ.

## ಬಾಡಿಗೆ ವ್ಯವಹಾರ:

ಪ್ಯಾಕ್ಸಗಳು ಸಾಮಾನ್ಯವಾಗಿ ಬ್ಯಾಂಕುಗಳಂತೆ ಕೇವಲ ಹಣಕಾಸಿನ ವ್ಯವಹಾರಕ್ಕೆ ಸೀಮಿತವಾಗದೇ ತನ್ನ ಸಂಪನ್ಮೂಲಗಳನ್ನು ಬಳಸಿಕೊಂಡು ಸದಸ್ಯರಿಗೆ ಅನುಕೂಲವಾಗುವ ಹತ್ತು ಹಲವು ಸೇವೆಗಳನ್ನು ನೀಡಲು ಸ್ವತಂತ್ರವಾಗಿದೆ. ಪರ್ತಾಪುರ ಪ್ಯಾಕ್ಸನ ಹಳೆಯ ಆಡಳಿತ ಮಂಡಳಿ ನಾಯಕರು ಮುತ್ಸದ್ದಿತನದಿಂದ ಸರಕಾರದಿಂದ ಉಚಿತವಾಗಿ ೨ ಎಕ್ರೆ ಜಾಗವನ್ನು ಸಂಘಕ್ಕೆ ಪಡೆದಿರುವುದರಿಂದ ಸಹಕಾರಿ ಸಂಘವು ಸ್ವಂತ ಆಸ್ತಿ ಹೊಂದಿರುವ ಪ್ರಬಲ ಸಂಘವಾಗಿದೆ. ನಂತರ ಬಂದಂತಹ ಆಡಳಿತ ಮಂಡಳಿಗಳು ಕೂಡಾ ಇರುವ ಸ್ಥಳದ ಉಪಯೋಗ ಮಾಡಿಕೊಂಡು ಸರಕಾರಗಳ ಸಹಾಯಧನ ಪಡೆದು ೩ ದಾಸ್ತಾನು ಮಳಿಗೆಗಳನ್ನು ನಿರ್ಮಿಸಿ ಸಂಘಕ್ಕೆ ಆದಾಯದ ಮೂಲ ನಿರ್ಮಿಸಿದ್ದಾರೆ. ದಾಸ್ತಾನು ಮಳಿಗೆಗಳನ್ನು ಬಾಡಿಗೆಗೆ ನೀಡಿ ಆದಾಯ ವೃದ್ದಿಸಿಕೊಂಡಿರುವ ಪರ್ತಾಪುರ ಪ್ಯಾಕ್ಸನವರು ಕಳೆದ ವರ್ಷ ರೂ **36** ಲಕ್ಷ ಬಾಡಿಗೆ ಆದಾಯ ಗಳಿಸಿದ್ದಾರೆ.

## ಅಂಗನವಾಡಿ ಆಹಾರ ತಯಾರಿ ಮತ್ತು ಹಿಟ್ಟಿನ ಗಿರಣಿ:

ಪರ್ತಾಪುರ ಪ್ಯಾಕ್ಸನವರು ವಿಶೇಷವಾಗಿ ಸಮಾಜಮುಖಿಯಾದ ಚಿಂತನೆಯೊಂದಿಗೆ ಸ್ವ ಸಹಾಯ ಗುಂಪಿನ ಮಹಿಳಾ ಸದಸ್ಯರ ಅನುಕೂಲಕ್ಕಾಗಿ ಅಂಗನವಾಡಿ ಆಹಾರ ತಯಾರಿಕಾ ಕೇಂದ್ರವೊಂದನ್ನ ನಡೆಸುತ್ತಿದ್ದು ಅದರ ಉಸ್ತುವಾರಿಯನ್ನ ಸ್ವ ಸಹಾಯ ಗುಂಪುಗಳಿಗೆ ನೀಡಿದ್ದಾರೆ. ಅಂತೆಯೇ ಹಿಟ್ಟಿನ ಗಿರಣಿ ಕೂಡಾ ನಡೆಸುತ್ತಿದ್ದು ಅದು ಕೂಡಾ ಮಹೀಳಾ ಸದಸ್ಯರ ಉಸ್ತುವಾರಿಗೊಳಪಟ್ಟಿದೆ.ಈ

ಚಟುವಟಿಕೆಗಳಿಂದ ಸಹಕಾರ ಸಂಘಕ್ಕೆ ಅಲ್ಪ ಪ್ರಮಾಣದ ಆದಾಯವು ಸಿಗುತ್ತಿದ್ದು ಇದು ಒಂದು ಮಾದರಿ ವ್ಯವಹಾರವಾಗಿದೆ.

## ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆ:

ಪರ್ತಾಪುರ ಪ್ಯಾಕ್ಸನವರು ವಿಶೇಷವಾಗಿ ತನ್ನ ಸದಸ್ಯರಿಗಾಗಿ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯನ್ನು ಜಾರಿಗೊಳಿಸಿದ್ದು ಎಲ್ಲಾ ಸಾಲಗಾರ ಸದಸ್ಯರಿಗೆ ಹೆಚ್ಚುವರಿ ಸಾಲ ಮಾಡಿ ಅವರಲ್ಲಿರುವ ಬೆಳೆಗಳಿಗೆ ಬೀಮಾ ಕಂತನ್ನು ಕಟ್ಟಿ ಯೋಜನೆಯ ಲಾಭ ಸಿಗುವಂತೆ ಮಾಡಿದ್ದಾರೆ. ಹೀಗೆ ತನ್ನ 1000 ಕ್ಕೂ ಹೆಚ್ಚು ಸದಸ್ಯರ ಬೀಮಾ ಕಂತನ್ನು ಕಟ್ಟುವುದರ ಮೂಲಕ ಕಮಿಷನ್ ರೂಪವಾಗಿ ರೂ 15000/- ಗಳನ್ನು ಸಂಘಕ್ಕೆ ಆದಾಯ ತಂದು ಕೊಟ್ಟಿದ್ದಾರೆ.

## ಪ್ರಧಾನ ಮಂತ್ರಿ ಸಾಮಾಜಿಕ ಸುರಕ್ಷಾ ಯೋಜನೆ:

ಸಮಾಜದ ಒಳಿತಿಗಾಗಿ ವ್ಯವಹಾರ ಮಾಡುವುದೇ ಸಹಕಾರ ಸಂಘಗಳ ಉತ್ತಮ ಲಕ್ಷಣ ಎಂಬ ಮಾತಿನಂತೆ ಪರ್ತಾಪುರ ಪ್ಯಾಕ್ಸನವರು ಪ್ರಧಾನ ಮಂತ್ರಿ ಸಾಮಾಜಿಕ ಸುರಕ್ಷಾ ಯೋಜನೆಗಳಲ್ಲಿ ಸದಸ್ಯರನ್ನು ಮತ್ತು ಸ್ವ ಸಹಾಯ ಸಂಘಗಳ ಸದಸ್ಯರನ್ನು ದಾಖಲಾತಿ ಮಾಡುವ ನಮೂಲಕ ಸಾಮಾಜಿಕ ಜಾಗೃತಿ ಮೂಡಿಸುವ ಕೆಲಸವನ್ನು ಯಶಸ್ವಿಯಾಗಿ ಮಾಡಿದ್ದಾರೆ.

## ಮುಂದಿನ ಯೋಜನೆಗಳು

ಪರ್ತಾಪುರ ಪ್ಯಾಕ್ಸನ ಆಡಳಿತ ಮಂಡಳಿಯವರು ಬಹಳಷ್ಟು ವಿಚಾರ ಮಾಡಿದ ಬಳಿಕ ಈ ಕೆಳಗಿನ ಯೋಜನೆಗಳನ್ನು ಹೊಂದಿರುತ್ತಾರೆ

೧. ತಮ್ಮಲ್ಲಿರುವ ಗೋದಾಮುಗಳು ಮತ್ತು ಖಾಲಿ ಜಾಗದ ಪರಿಣಾಮಕಾರಿ ಬಳಕೆಗಾಗಿ ಹಲವು ಯೋಜನೆಗಳನ್ನು ಹೊಂದಿದ್ದಾರೆ. ಊರಿನ ಮಧ್ಯ ಭಾಗದಲ್ಲಿರುವ ಪ್ಯಾಕ್ಸನಲ್ಲಿ ಅಂಗಡಿ ಕೋಣೆಗಳನ್ನು ಕಟ್ಟಿ ಬಾಡಿಗೆಗೆ ನೀಡುವ ಮೂಲಕ ನಿಶ್ಚಿತ ಆದಾಯ ಪಡೆಯುವ ಗುರಿ ಇರಿಸಿಕೊಂಡಿದ್ದಾರೆ.
೨. ರೈತರಿಗೆ ಇನ್ನೂ ಹೆಚ್ಚಿನ ಸಾಲ ಸೌಲಭ್ಯಗಳನ್ನು ಸ್ವಂತ ಬಂಡವಾಳದಿದಂದ ನೀಡುವ ಯೋಜನೆಯಿದೆ.
೩. ಹಿಟ್ಟಿನ ಗಿರಣಿಯನ್ನು ವಿಸ್ತರಿಸಿ ದಾಲ್ ಮಿಲ್ ಮಾಡುವ ಬಗ್ಗೆಯೂ ಯೋಜನೆಯಿದೆ.
೪. ಚಿನ್ನ ಮತ್ತು ಆಭರಣ ಸಾಲ ನೀಡಲು ಉದ್ದೇಶಿಸಲಾಗಿದೆ.
೫. ಲಾಕರಗಳನ್ನು ಸ್ಥಾಪಿಸಿ ಬಾಡಿಗೆ ದರದಲ್ಲಿ ಒದಗಿಸುವ ಯೋಜನೆಯಿದೆ.
೬. ಈಗ ಕಂಪ್ಯೂಟರೀಕರಣಗೊಂಡ ಬಳಿಕ ಸಿಎಸ್‌ಸಿ ಪೋರ್ಟಲ್ ಮೂಲಕ ಹಲವು ಸೆಔಎಗಳನ್ನು ನೀಡುವುದು.

ಹೀಗೆ ಹಲವು ಜನಪರ ಯೋಜನೆಗಳ ಮೂಲಕ ಪ್ಯಾಕ್ಸ ತನ್ನ ತಲುಪುವಿಕೆಯ ವ್ಯಾಪ್ತಿಯನ್ನು ವಿಸ್ತರಿಸುವುದು, ಜನರಿಗೆ ಅಗತ್ಯವಾದ ಸೇವೆಗಳನ್ನು ನೀಡುವುದು, ರೈತರಿಗೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸುವುದು, ಜನೋಪಯೋಗಿ ಕೆಲಸಗಳನ್ನು ಮತ್ತು ಯೋಜನೆಗಳನ್ನು ಹೊಂದುವುದು ಹೀಗೆ ಹಲವು ರೀತಿಗಳಲ್ಲಿ ಸದಸ್ಯರಿಗೆ ಪ್ರಯೋಜನವಾಗುವುದು ಸಂಘದ ಉದ್ದೇಶವಾಗಿದೆ.

ಲೇಖನ: ಬಿ ಸುಬ್ರಹ್ಮಣ್ಯ ಪ್ರಭು ನಿರ್ದೇಶಕರು, ಸಹಾರ್ದ ತರಬೇತಿ ಕೇಂದ್ರ ಬೀದರ

ಪ್ಯಾಕ್ಸ ಪರ್ತಾಪುರದ ಮುಖ್ಯ ಕಛೇರಿ ಕಟ್ಟಡ




ಪ್ಯಾಕ್ಸ ಪರ್ತಾಪುರದ ಗೋದಾಮು ಕಟ್ಟಡ

